# ತಲೆಗೆ ಬಿದ್ದ ಏಟು

■ ಡಾ. ನಾಗರಾಜು ಜೆ.ಬಿ. ಭೈರೇನಹಳ್ಳಿ
ಕಲೆ: ರಾಮಕೃಷ್ಣ ಸಿದ್ರಪಾಲ



'ಲೀಡರ್‌ಗೆ ಪ್ರಜ್ಞೆ ಬಂದಿದೆಯಂತೆ, ಕಣ್ಣು ಬಿಟ್ಟು ಎಲ್ಲರನ್ನು ನೋಡುತ್ತಿದ್ದಾರಂತೆ,' ಎಂಬ ಸುದ್ದಿ ಪಟ್ಟಣದ ತುಂಬಾ ಕಾಳ್ಗಿಚ್ಚಿನಂತೆ ಹಬ್ಬಿ, ಇವನ ಕಿವಿಗೂ ಬಿತ್ತು. ಈತ ಲೀಡರ್‌ಗೆ ಬಲಗೈ ಬಂಟ. ಅವರ ನೆರಳಿನಂತೆ ಅವರು ಹೋದ ಕಡೆಗೆಲ್ಲಾ ಹೋಗುತ್ತಿದ್ದ. ಅವರ ಕಾರ್ ಡ್ರೈವರ್ ಕೂಡ ಈತನೇ. ಅವರ ಭಾಷಣಗಳನ್ನು ಕೇಳಿ ಕೇಳಿ ಈತ ಅವರ ಪ್ರಭಾವಕ್ಕೊಳಗಾಗಿದ್ದ. ಲೀಡರ್ ಎಂದರೆ ಹೀಗಿರಬೇಕು, ಅವರ ಭಾಷಣ ಕೇಳುತ್ತಿದ್ದರೆ, ಕೇಳುತ್ತಲೇ ಇರಬೇಕು ಎನಿಸುತ್ತಿತ್ತು. ಎಷ್ಟೊಂದು ನಿರರ್ಗಳವಾಗಿ, ಸ್ಫುಟವಾಗಿ ಮಾತನಾಡುತ್ತಾರೆ. ಅಂಕಿಅಂಶಗಳನ್ನು ಅವರು ಹೇಗೆ ನೆನಪಿನಲ್ಲಿಟ್ಟುಕೊಳ್ಳುತ್ತಾರೋ? ಅದು ಹೇಗೆ ಗಂಟೆಗಟ್ಟಲೆ ಮಾತನಾಡುತ್ತಲೇ ಇರುತ್ತಾರೋ? ಎಂದು ಲೀಡರ್ ಬಗ್ಗೆ ಈತನಿಗೆ ಬಹಳ ಹೆಮ್ಮೆ. ಅವರ ಭಾಷಣವನ್ನು ಒಮ್ಮೆ ಕೇಳಿದವರು ಜೀವನಪರ್ಯಂತ ಅವರ ಪ್ರಭಾವಕ್ಕೆ ಒಳಗಾಗುವಷ್ಟು ಅತ್ಯುತ್ತಮ ವಾಗ್ಮಿ. ಅವರನ್ನು ಮಾತಿನಲ್ಲಿ, ವಾದದಲ್ಲಿ ಸೋಲಿಸಬಲ್ಲವರು ಈ ನಾಡಿನಲ್ಲಿ ಯಾರೂ ಇಲ್ಲವೇ ಇಲ್ಲ ಎಂಬ ವಿಶ್ವಾಸ ಈತನಿಗೆ. ಅಂತಹ ನಾಯಕರ ಬಲಗೈ ಬಂಟನಾಗಲು ಕೂಡ ಅದೃಷ್ಟ ಮಾಡಿರಬೇಕು. ಒಂದು ವೇಳೆ ಅವರೇನಾದರೂ ಬಾವಿಗೆ ಬೀಳು ಎಂದರೆ ಈತ ಅದಕ್ಕೂ ತಯಾರಾಗಿದ್ದ. ಅವರ ಬಗ್ಗೆ ಈತನಿಗೆ ಅಷ್ಟು ಪ್ರೀತಿ, ಗೌರವ ಮತ್ತು ಅಭಿಮಾನ. ಆ ಘಟನೆ ನಡೆದ ದಿನ ಈತನೇ ಕಾರಿನಲ್ಲಿ ಅವರನ್ನು ಮನೆಯ ಹತ್ತಿರ ಡ್ರಾಪ್ ಮಾಡಿ, ಅಲ್ಲಿಂದ ಮನೆಯ ಕಡೆಗೆ ನಡೆದು ಬಂದಿದ್ದ. ಆ ವೇಳೆಯಲ್ಲಿಯೇ ಲೀಡರ್ ಮೇಲೆ, ಅವರ ಮನೆಯ ಎದುರಿನಲ್ಲಿಯೇ ಮಾರಣಾಂತಿಕ ಹಲ್ಲೆಯಾಗಿತ್ತು. ಅವರ ತಲೆಗೆ ಯಾರೋ ರಾಡಿನಿಂದ ಹಲ್ಲೆ ಮಾಡಿ, ಸತ್ತಿದ್ದಾರೆಂದು ಭಾವಿಸಿ, ಓಡಿ ಹೋಗಿದ್ದರು. ರಕ್ತದ ಮಡುವಿನಲ್ಲಿ ಮನೆಯ ಎದುರಿಗೆ ಬಿದ್ದಿದ್ದ ಅವರನ್ನು ಯಾರೋ ಆಸ್ಪತ್ರೆಗೆ ಸೇರಿಸಿದ್ದರು. ದೇವರ ದಯೆಯಿಂದ ಅವರು ಪ್ರಾಣಾಪಾಯದಿಂದ ಪಾರಾದರೂ ಕೂಡ ಪೂರ್ತಿ ಪ್ರಜ್ಞೆ ಬರಲು ಮೂರ್ನಾಲ್ಕು ದಿನ ಹಿಡಿಯಿತು. ಈ ಹಲ್ಲೆಯಿಂದ ಕೆರಳಿದ ಅವರ ಪಕ್ಷದವರು ಬಂದ್‌ಗೆ ಕರೆಕೊಟ್ಟರು. ಪಟ್ಟಣದಲ್ಲೆಲ್ಲಾ ಗಲಭೆಗಳು ಶುರುವಾದವು. ರಸ್ತೆಯಲ್ಲಿ ಟೈರ್ ಸುಟ್ಟರು. ಅಂಗಡಿ, ಶಾಲಾ–ಕಾಲೇಜುಗಳನ್ನು ಮುಚ್ಚಿಸಲಾಯಿತು.

ತನ್ನ ನಾಯಕನಿಗೆ ಪ್ರಜ್ಞೆ ಬಂದ ವಿಷಯ ಕೇಳುತ್ತಲೇ ಅವರನ್ನು ನೋಡಲು ಹೊರಟು ನಿಂತ ಈತನನ್ನು ಹೆಂಡತಿಯು 'ಎಲ್ಲಿಗೆ?' ಎಂದು ಪ್ರಶ್ನಿಸಿದಳು.

'ನಾಯಕರಿಗೆ ಪ್ರಜ್ಞೆ ಬಂದಿದೆಯಂತೆ. ಹೋಗಿ ಅವರನ್ನು ನೋಡಬೇಕು. ಯಾರು ಹೀಗೆ ಮಾಡಿದ್ದು ಅಂತ ಅವರ ಹೆಸರು ಹೇಳಿದ್ರೆ ಸಾಕು, ಅಂಥವರ ತಲೆ ಕಡಿದುಹಾಕುತ್ತೇನೆ. ನಮ್ಮನ್ನೆಲ್ಲಾ ಅವರು ಕೈಲಾಗದ ಷಂಡರೆಂದುಕೊಂಡಿದ್ದಾರೆ. ನಮ್ಮ ಪೌರುಷ ಏನೆಂದು ಅವರಿಗೆ ಇಷ್ಟರಲ್ಲೇ ತೋರಿಸುತ್ತೇವೆ' ಎಂದು ಆವೇಶದಲ್ಲಿ ಬಡಬಡಿಸಿದ ಗಂಡನ ಮಾತುಗಳನ್ನು ಕೇಳಿ ಇವಳ ಎದೆ ಧಸಕ್ಕೆಂದಿತು.

ಮೂರು ದಿನದಿಂದಲೂ ಜ್ವರದಿಂದ ನರಳುತ್ತಿದ್ದ ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗೋಣ ಎಂಬ ಮಾತನ್ನು ಕಿವಿಗೆ ಹಾಕಿಕೊಳ್ಳದೆ, ಈಗ ತನ್ನ ನಾಯಕನನ್ನು ನೋಡಲು ಆಸ್ಪತ್ರೆಗೆ ಹೊರಟು ನಿಂತ ಗಂಡನನ್ನು ನೋಡಿ ಅವಳಿಗೆ ಏನು ಹೇಳಬೇಕೋ ತೋಚಲಿಲ್ಲ. ತಲೆಗೆ ಏಟು ಬಿದ್ದು ಆಸ್ಪತ್ರೆಯಲ್ಲಿರುವ ನಾಯಕನನ್ನು ನೋಡಿಕೊಳ್ಳಲು ಆ ಪಕ್ಷದ ಪಡೆಯೇ ಇದೆ. ಆದರೆ ನಮ್ಮನ್ನು ನೋಡಿಕೊಳ್ಳುವವರು ಯಾರು? ಹಿಂದೊಮ್ಮೆ ಮಗುವಿಗೆ ಜ್ವರ ಹೆಚ್ಚಾಗಿ, ಜ್ವರ ತಲೆಗೆ ಏರಿ ಫಿಟ್ಸ್ ಬಂದಿತ್ತು. ಆಗ ವೈದ್ಯರ ಸಲಹೆಯಂತೆ ಮಗುವಿಗೆ ಜ್ವರ ಬಂದರೆ, ತಕ್ಷಣ ಜ್ವರದ ಔಷಧಿ ಹಾಕುವುದು ಮಾತ್ರವಲ್ಲದೆ ನೀರಿನಲ್ಲಿ ಅದ್ದಿದ ಬಟ್ಟೆಯಿಂದ ಮೈಯೆಲ್ಲಾ ಒರೆಸಿ, ಎರಡು ದಿನವಾದರೂ ಜ್ವರ ಇಳಿಯದಿದ್ದರೆ ಫಿಟ್ಸ್ ಬರದಂತಿರಲು ಹಾಕುವ ಒಂದು ಔಷಧಿಯನ್ನೂ ಕೊಟ್ಟಿದ್ದರು. ಹಾಗಾಗಿ ಮಗುವಿಗೆ ಜ್ವರ ಬಂದರೆ ಸಾಕು, ಜ್ವರ ಇಳಿಯುವವರೆಗೂ ಈಕೆ ದೇವರ ಜೊತೆ ಕಂಬನಿಯ ಕಾಳಗ ಮಾಡುತ್ತಾ ನಿಲ್ಲುತ್ತಿದ್ದಳು. ಮಗುವಿಗೆ ಜ್ವರ ಬಿಡುವವರೆಗೂ ಆಕೆಗೆ ಕೈಕಾಲೇ ಆಡುತ್ತಿರಲಿಲ್ಲ. ಈಗ ಮಗುವಿಗೆ ಮೂರ್ನಾಲ್ಕು ದಿನದಿಂದ ಜ್ವರ ಬಿಟ್ಟು ಬಿಟ್ಟು ಬರುತ್ತಿದ್ದುದರಿಂದ ಇವಳು ಬಹಳ ಆತಂಕದಲ್ಲಿದ್ದಳು. ಹತ್ತಿರದ ಕ್ಲಿನಿಕ್‌ಗೆ ಹೋಗೋಣವೆಂದರೆ ಇಡೀ ಪಟ್ಟಣವೇ ಬಂದ್ ಆಗಿದೆ. ದೊಡ್ಡಾಸ್ಪತ್ರೆಗೆ ಕರೆದುಕೊಂಡು ಹೋಗಲು ಗಂಡನಿಗೆ ಕೇಳಿದರೆ, ಆತನಿಗೆ ಮಗುವಿನ ಪ್ರಾಣಕ್ಕಿಂತ ತನ್ನ ನಾಯಕನ ತಲೆಯೇ ಮುಖ್ಯವಾಗಿದೆ.

ಬರಗಾಲದಲ್ಲಿ ಅಧಿಕ ಮಾಸ ಎನ್ನುವಂತೆ ಇದೇ ಸಮಯದಲ್ಲಿ ಗಂಡನು ಏನೇನೋ ಬಡಬಡಿಸುತ್ತಾ, ತನ್ನ ನಾಯಕನ ಮೇಲೆ ಆದ ಹಲ್ಲೆಗೆ ಸೇಡು ತೀರಿಸಿಕೊಳ್ಳುತ್ತೇನೆ ಎಂದು ಬುಸುಗುಟ್ಟುತ್ತಿದ್ದ, ತನಗೆ ತಾನೇ ಏನೇನೋ